PW 1

(ಇಂದು ದಿನಾಂಕಃ 19-06-2024 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ ಪಿ.ಹೆಚ್.ಕೆ. ವಕೀಲರಿಂದ**

ನಾನು ಈ ಫಿರ್ಯಾದು ಸಂಸ್ಥೆಯಲ್ಲಿ ಕಳೆದ 6 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಸಾಲಗಾರರು ಯಾವ ದಿನಾಂಕದಂದು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದು ಈಗ ಹೇಳಲು ನನಗೆ ನೆನಪಿಲ್ಲ. ಸಾಲಗಾರನು ವ್ಯಾಪಾರ ಮಾಡಲು ನಮ್ಮ ಸಂಸ್ಥೆಗೆ ಸಾಲದ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಸಾಲಗಾರನು ಯಾವ ವ್ಯಾಪಾರ ನಡೆಸಲು ಸಾಲದ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂಬ ಬಗ್ಗೆ ನಾನು ದಾಖಲೆಗಳನ್ನು ಪಡೆದುಕೊಂಡಿದ್ದು ಇರುವುದಿಲ್ಲ. ಸಾಲಗಾರರ ಜೊತೆ ಜಾಮೀನುದಾರರು ಅರ್ಜಿ ಸಲ್ಲಿಸುವ ಕಾಲಕ್ಕೆ ಬಂದಿರುತ್ತಾರೆ. ಸಾಲದ ಅರ್ಜಿ ಸಲ್ಲಿಸಿ ಸಾಲ ಮಂಜೂರು ಆಗಲು 3-4 ದಿವಸಗಳು ಬೇಕಾಗುತ್ತವೆ. ಸಾಲಗಾರರಿಗೆ ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಸಾಲಗಾರನಿಗೆ ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯ ಇದೆಯಾ ಎಂದು ಖಚಿತಪಟ್ಟ ಮೇರೆಗೆ ಸಾಲವನ್ನು ಮಂಜೂರು ಮಾಡುತ್ತೇವೆ. ನಮ್ಮ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸಭೆಯು ತಿಂಗಳಿಗೆ ಒಂದು ಬಾರಿ ಕೊನೆಯ ವಾರದಂದು ನಡೆಯುತ್ತವೆ. ದಿಃ 30-01-2021 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆಡಳಿತ ಮಂಡಳಿಯ ಸಭೆಯು ನಡೆದಿರುತ್ತದೆ.

ನಮ್ಮ ಶಾಖಾ ವ್ಯವಸ್ಥಾಪಕರು ಸಾಲಗಾರರಿಂದ ಯಾವ ಅವಶ್ಯಕವಾದ ದಾಖಲೆಗಳನ್ನು ಪಡೆದುಕೊಳ್ಳಬೇಕು ಎಂದು ನಮಗೆ ನಿರ್ದೇಶನ ನೀಡುತ್ತಾರೆ. ಆಡಳಿತ ಮಂಡಳಿಯು ಸಾಲ ಮಂಜೂರಾತಿ ಮಾಡಿದ ಆದೇಶವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಲದ ಅರ್ಜಿಗಳು ಕೆಲವೊಂದು ಸಂದರ್ಭದಲ್ಲಿ ತಿರಸ್ಕಾರಗೊಳ್ಳುವ ಸಾಧ್ಯತೆಗಳು ಇರುತ್ತವೆ ಎಂದರೆ ಸರಿ. ತಿರಸ್ಕಾರಗೊಂಡ ಅರ್ಜಿಗಳು ನಮ್ಮ ಶಾಖೆಯಲ್ಲಿ ಇರುತ್ತವೆ ಎಂದರೆ ಸರಿ. ಸಾಲದ ಅರ್ಜಿಯಲ್ಲಿ ನಮೂದಿಸಿದ ಮೊತ್ತಕ್ಕಿಂತ ಕಡಿಮೆ ಸಾಲದ ಹಣ ಮಂಜೂರು ಆಗುವ ಸಾಧ್ಯತೆ ಇರುತ್ತವೆ ಎಂದರೆ ಸರಿ. ನಾನು ಸಾಲಗಾರರಿಂದ ಭದ್ರತೆಗಾಗಿ ಎರಡು ಜಾಮೀನುದಾರರನ್ನು ಪಡೆದುಕೊಂಡಿರುತ್ತೇನೆ. ಫಿರ್ಯಾದು ಸಂಸ್ಥೆಯವರು ಜಾಮೀನುದಾರರಿಂದ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಅವರು ನಮ್ಮ ಸಂಸ್ಥೆಯಲ್ಲಿ ಸದಸ್ಯತ್ವ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಸಾಲ ಮಂಜೂರು ಆದ ನಂತರ ಸಾಲಗಾರರಿಂದ ಹಾಗೂ ಜಾಮೀನುದಾರರಿಂದ ಸಾಲದ

ಕರಾರು, ಡಿಮಾಂಡ ಫ್ರಾಮಿಸರಿ ನೋಟ್ ಹಾಗೂ ಇತರ ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಳ್ಳುತ್ತೀರಾ ಎಂದರೆ ಸಾಕ್ಷಿಯು ನಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ಸದರಿ ವಿಷಯವು ಪ್ರಸ್ತಾಪ ಮಾಡುವ ಪೂರ್ವದಲ್ಲೆ ಸಹಿಯನ್ನು ಪಡೆದುಕೊಳ್ಳುವುದಾಗಿ ನುಡಿಯುತ್ತಾರೆ. ಸಾಲಗಾರರು ನಮ್ಮ ಸಂಸ್ಥೆಗೆ ಸಾಲದ ಅರ್ಜಿ ಸಲ್ಲಿಸಿದ ನಂತರ ಒಟ್ಟು ಎಷ್ಟು ಸಲ ಭೇಟಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ.

ಈ ಪ್ರಕರಣದ ಸಾಲಗಾರರು ಒಟ್ಟು 12 ಕಂತಿನ ಸಾಲವನ್ನು ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ಸಾಲ ಮಂಜೂರಾಗುವ ಪೂರ್ವದಲ್ಲಿ ಅವರಿಂದ ಎಷ್ಟು ಜಾಮೀನುದಾರರನ್ನು ಭದ್ರತೆಗಾಗಿ ಪಡೆದುಕೊಳ್ಳಬೇಕು ಎಂದು ಆಡಳಿತ ಸಭೆಯಲ್ಲಿ ನಿರ್ಣಯವಾಗುತ್ತದೆ ಎಂದರೆ ಸರಿ. ಸಾಲದ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಸದರಿ ಸಾಲಗಾರನ ಮೊದಲ ಸಾಲ ಬಾಕಿ ಇದ್ದಲ್ಲಿ ನಂತರ ಸಲ್ಲಿಸಿದ ಸಾಲದ ಅರ್ಜಿಯು ತಿರಸ್ಕಾರಗೊಳ್ಳುವ ಸಾಧ್ಯತೆ ಇರುತ್ತವೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಮುಂದುವರೆದು ಸದರಿ ನಿರ್ಣಯವು ಆಡಳಿತ ಮಂಡಳಿಯು ತೆಗೆದುಕೊಳ್ಳುತ್ತದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ